# ಶಬ್ದದ ಮಂತ್ರಿ!



■ ಪ್ರವೀಣ ಕುಲಕರ್ಣಿ

ಮುಂಬೈಗೆ ನಿಯಮಿತವಾಗಿ ಭೇಟಿ ನೀಡುವವರಲ್ಲಿ ನೀವೂ ಒಬ್ಬರಾಗಿದ್ದರೆ ಎಂದಾದರೂ ಒಂದು ದಿನ ಈ ವ್ಯಕ್ತಿ ನಿಮಗೆ ಮುಖಾಮುಖಿ ಆಗಬಹುದು. ಕೈಯಲ್ಲೊಂದು ಪುಟ್ಟ ಸಾಧನ ಹಿಡಿದು, ಏನನ್ನೋ ಅಳತೆ ಮಾಡುತ್ತಾ ನಿಂತ ಬಿಂಬ ನಿಮ್ಮ ಕಣ್ಣಿಗೆ ಬೀಳಲೂಬಹುದು. ಅವರು ಸುಮ್ಮೈರಾ ಅಬ್ದುಲಾಲಿ. ದೇಶದ ವಾಣಿಜ್ಯ ರಾಜಧಾನಿಯಲ್ಲಿ 'ಶ್... ಸದ್ದು' ಎಂದು ನಾಯ್ಸ್ ಮೀಟರ್ (ಶಬ್ದ ಮಾಪಕ) ಹಿಡಿದು ಎಲ್ಲರನ್ನೂ ಎಚ್ಚರಿಸುತ್ತಲೇ ಮುನ್ನಡೆದವರು. ಅಂತಹ ಜನಜಾಗೃತಿಯನ್ನು ಮಹಾರಾಷ್ಟ್ರದ ತುಂಬಾ, ಅಷ್ಟೇ ಏಕೆ, ದೇಶದ ತುಂಬಾ ಮೂಡಿಸುವ ಸಲುವಾಗಿಯೇ ಅವಾಜ್ ಫೌಂಡೇಷನ್ ಅನ್ನೂ ಹುಟ್ಟು ಹಾಕಿದವರು.

ಸುಮ್ಮೈರಾ ಅವರ ನೆಮ್ಮದಿಯನ್ನು ಕೆಡಿಸಿದ ಎರಡು ಮುಖ್ಯ ಸಂಗತಿಗಳೆಂದರೆ ಒಂದು, ಶಬ್ದ ಮಾಲಿನ್ಯ; ಮತ್ತೊಂದು, ಮರಳಿನ ಗಣಿಗಾರಿಕೆ. ಈ ಎರಡೂ 'ಭೂತ'ಗಳ ವಿರುದ್ಧ ಕಳೆದ ಎರಡು ದಶಕಗಳಿಂದಲೂ ನಿರಂತರ ಹೋರಾಟ ಅವರದು. 'ನಿಶ್ಶಬ್ದ ವಲಯ'ಗಳ ರಚನೆಗಾಗಿ ಮತ್ತು ಹಬ್ಬದ ಸಂದರ್ಭದಲ್ಲಿ ಶಬ್ದದ ಸುರಕ್ಷಿತ ಮಟ್ಟ ಕಾಪಾಡುವುದಕ್ಕಾಗಿ ಸರ್ಕಾರದ ವಿರುದ್ಧವೇ ಸಮರ ಸಾರಿದವರು ಅವರು. ಅದು 2002ರ ಸಂದರ್ಭ. ತಮ್ಮ ಚಿಕ್ಕಪ್ಪನ ಜತೆ ಕರಾವಳಿ ತೀರದುದ್ದಕ್ಕೂ ಅವರು ಪ್ರವಾಸ ಕೈಗೊಂಡಿದ್ದರು. ಎಲ್ಲೆಲ್ಲೂ ಮರಳು ತೆಗೆಯುವ ದಂಧೆ ಎಗ್ಗಿಲ್ಲದೆ ನಡೆಯುತ್ತಿರುವುದನ್ನು ಅವರು ಗಮನಿಸಿದರು. ಪರಿಸರದ ಉಳಿವಿಗಾಗಿ ತಮ್ಮ ಜೀವನವನ್ನು ಮುಡುಪಾಗಿಡಲು ನಿರ್ಧರಿಸಿದರು.

'ಶಬ್ದ ಮಾಲಿನ್ಯದ ಕುರಿತು ಯಾರೊಬ್ಬರೂ ತಲೆ ಕೆಡಿಸಿಕೊಳ್ಳದ ಸಂದರ್ಭದಲ್ಲಿ ನಾನು ಜಾಗೃತಿ ಮೂಡಿಸಲು ಮುಂದಾದೆ. ನಾಯ್ಸ್ ಮೀಟರ್ ಹಿಡಿದು ಎಲ್ಲ ಸ್ಥಳಗಳಲ್ಲಿ ಓಡಾಡಿ ಪರೀಕ್ಷಿಸಿದೆ. ಜನದಟ್ಟಣೆ ಪ್ರದೇಶಗಳು, ಸಂಚಾರ ವಲಯಗಳು, ಉತ್ಸವದ ಪೆಂಡಾಲ್‌ಗಳು ಎಲ್ಲೆಲ್ಲೂ ತಪಾಸಣೆ ಮಾಡಿ ನೋಡಿದೆ. ಶಬ್ದದ ಮಿತಿ 55 ಡೆಸಿಬೆಲ್ ಎಂಬ ನಿಯಮ ನನಗೆ ತಮಾಷೆಯಾಗಿ ಕಂಡಿತು' ಎಂದು ತಮ್ಮ ಹೋರಾಟದ ಆರಂಭದ ದಿನಗಳನ್ನು ಮೆಲುಕು ಹಾಕುತ್ತಾರೆ ಸುಮ್ಮೈರಾ.

ಶಬ್ದ ಮಾಲಿನ್ಯದ ಭೂತವನ್ನು ಹೀಗೇ ಬೆಳೆಯಲು ಬಿಟ್ಟರೆ ಮನುಕುಲದ ಮೇಲೆ ತೀರಾ ಕೆಟ್ಟ ಪರಿಣಾಮ ಬೀರಲಿದೆ ಎಂದು ಚಿಂತಿಸಿದ ಅವರು, 'ನನ್ನ ಸುತ್ತಮುತ್ತಲಿನ ಪರಿಸರದಲ್ಲಿ ಸಾಧ್ಯವಾದಷ್ಟು ಮಾಲಿನ್ಯ ನಿಯಂತ್ರಣ ಮಾಡುವೆ' ಎಂದು ನಿರ್ಧರಿಸಿದರು. ಅಧಿಕ ಶಬ್ದದ ಉತ್ಪತ್ತಿಯಿಂದ ಆಗುತ್ತಿರುವ ದುಷ್ಪರಿಣಾಮಗಳ ಕುರಿತು ಜನರಿಗೆ ತಿಳಿಹೇಳಿದರು. 'ನಮ್ಮ ದೇಶದಲ್ಲಿ ರಾಜಕಾರಣಿಗಳ ಪಾಲಿಗೆ ಸಂಸ್ಕೃತಿ ಮತ್ತು ಧರ್ಮ ಎರಡೂ ದೊಡ್ಡ ವೋಟ್ ಬ್ಯಾಂಕ್‌ಗಳಾಗಿವೆ. ಶಬ್ದ ಮಾಲಿನ್ಯ ನಿಯಂತ್ರಣಕ್ಕೆ ಅವರು ಮುಂದಾಗುವುದಾದರೂ ಹೇಗೆ' ಎಂದು ಸುಮ್ಮೈರಾ ಪ್ರಶ್ನೆ ಹಾಕುತ್ತಾರೆ.

'ಹಬ್ಬ–ಉತ್ಸವದ ಸಂದರ್ಭದಲ್ಲಿ ಪೊಲೀಸರು ಧ್ವನಿವರ್ಧಕ ಬಳಕೆ ತಡೆಗಟ್ಟಲು ಮುಂದಾದರೆ ರಾಜಕಾರಣಿಗಳಿಂದ ತೀವ್ರ ಪ್ರತಿರೋಧ ಎದುರಿಸಬೇಕಾಗುತ್ತದೆ. ಶಬ್ದ ಮಾಲಿನ್ಯಕ್ಕಿಂತ ದೊಡ್ಡ ಸಮಸ್ಯೆಗಳು ಈ ದೇಶದಲ್ಲಿ ಹಲವಾರು ಇವೆ. ಬಡತನ, ಅಪೌಷ್ಟಿಕತೆ ಕಡೆಗೆ ನೀವು ಗಮನಹರಿಸಿ. ಹೆಚ್ಚುತ್ತಿರುವ ಶಬ್ದದ ಮಟ್ಟವು ಅಭಿವೃದ್ಧಿಯ ಸಂಕೇತವಾಗಿದೆ. ಗಡಿಯಾರ ಎಂದಿಗೂ ಹಿಮ್ಮುಖವಾಗಿ ಚಲಿಸದು. ಹಾಗೆಯೇ ಅಭಿವೃದ್ಧಿಯ ಪಥದಲ್ಲಿ ಹಿಮ್ಮುಖ ಚಲನೆ ಸಾಧ್ಯವಿಲ್ಲ. ಮುಂಬೈನ ಸಾಂಸ್ಕೃತಿಕ ಏಳಿಗೆಗೆ ಧಕ್ಕೆಯನ್ನೂ ನೀವು ತರುತ್ತಿದ್ದೀರಿ' ಎಂದು ಸಿಟ್ಟು ತೋರಿದವರು ಹಲವರು ಎನ್ನುತ್ತಾರೆ ಸುಮ್ಮೈರಾ.

ಸರ್ಕಾರದಿಂದ ಯಾವುದೇ ನಿಯಮ ಅನುಷ್ಠಾನಕ್ಕೆ ಬಾರದೆ ಏನೇನೂ ಬದಲಾವಣೆ ತರುವುದು ಸಾಧ್ಯವಿಲ್ಲ ಎಂಬುದನ್ನು ಸುಮ್ಮೈರಾ ಬಹುಬೇಗ ಅರಿತರು. ಆದರೆ, ಸರ್ಕಾರದ ಮೇಲೆ ಒತ್ತಡ ಹೇರುವಂತಹ ಕಾನೂನು ಹೋರಾಟ ಹೇಗಿರಬೇಕು ಎಂಬುದರ ಕುರಿತು ಅವರಿಗೆ ಅರಿವಿರಲಿಲ್ಲ. ಆಗ ಅವರ ನೆರವಿಗೆ ಬಂದವರು ವಕೀಲರಾದ ಈಶ್ವರ್ ನಂಕಣಿ. 2007ರಲ್ಲಿ ನಂಕಣಿ ಅವರ ಮೂಲಕ ಸುಮ್ಮೈರಾ ಬಾಂಬೆ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದನ್ನು ಸಲ್ಲಿಸಿ, ಶಬ್ದ ಮಾಲಿನ್ಯ ತಡೆಗಟ್ಟುವ ನಿಯಮ ರೂಪಿಸುವಂತೆ ಮನವಿ ಮಾಡಿದರು. ಶೈಕ್ಷಣಿಕ ಸಂಸ್ಥೆಗಳು, ನ್ಯಾಯಾಲಯಗಳು, ಆಸ್ಪತ್ರೆಗಳು ಮತ್ತು ಧಾರ್ಮಿಕ ಸ್ಥಳಗಳ ಸುತ್ತಮುತ್ತ ನಿಶ್ಶಬ್ದ ವಲಯಗಳನ್ನು ಸೃಷ್ಟಿಸಬೇಕು ಎಂಬುದು ಅವರ ಬೇಡಿಕೆಯಾಗಿತ್ತು.

ಸುಮ್ಮೈರಾ ಅವರ ಮನವಿಯನ್ನು ಪುರಸ್ಕರಿಸಿದ ಹೈಕೋರ್ಟ್ ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ ರೂಪಿಸಿರುವ ನಿಯಮಗಳನ್ನು ಚಾಚೂತಪ್ಪದೆ ಅನುಷ್ಠಾನಕ್ಕೆ ತರಬೇಕು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು. ರಾಜ್ಯ ಸರ್ಕಾರ, ಎಲ್ಲ ನಗರ ಸಂಸ್ಥೆಗಳಿಗೆ ನಿಶ್ಶಬ್ದ ವಲಯಗಳನ್ನು ಸೃಷ್ಟಿಸಬೇಕು ಎಂದು ಸೂಚನೆ ನೀಡಿತು. ಅಲ್ಲಿಗೆ ಸುಮ್ಮೈರಾ ಸುಮ್ಮನಾಗಲಿಲ್ಲ. ಎಲ್ಲಾ ಸ್ಥಳಗಳಿಗೆ ಖುದ್ದು ಹೋಗಿ ಶಬ್ದ ಮಾಲಿನ್ಯ ಮಟ್ಟದ ದತ್ತಾಂಶವನ್ನು ತಂದು, ಸರ್ಕಾರ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿ, ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಮರಳು ಮಾಫಿಯಾ ವಿರುದ್ಧದ ಹೋರಾಟದಲ್ಲಿ ಪ್ರಾಣಾಪಾಯ ಎದುರಾದರೂ ಅವರು ಮಣಿಯಲಿಲ್ಲ. ಮರಳು ಮಾಫಿಯಾ ವಿರುದ್ಧದ ಹೋರಾಟದಲ್ಲಿ ತೊಡಗಿದವರ ನೆರವಿಗಾಗಿ 'ಮಿತ್ರ' ಎಂಬ ಸಂಘಟನೆಯನ್ನೂ ಅವರು ಸ್ಥಾಪಿಸಿದರು. ಅವರ ನಿಸ್ವಾರ್ಥ ಸೇವೆಯನ್ನು ಗುರುತಿಸಿ, ಹಲವು ಅಂತರರಾಷ್ಟ್ರೀಯ ಪ್ರಶಸ್ತಿಗಳು ಅವರಿಗೆ ಒಲಿದುಬಂದವು.

ಎರಡು ದಶಕಗಳಿಂದ ತಪಸ್ಸಿನಂತೆ ನಡೆಸುತ್ತಿರುವ ಕೆಲಸವನ್ನು ಅವರು ಎಂದಿಗೂ ತಪ್ಪಿಸಿಲ್ಲ. ಶಬ್ದ ಮಾಲಿನ್ಯದ ಕುರಿತು ಅವರು ಸರ್ಕಾರಿ ವಲಯದಲ್ಲಿ ನಿರಂತರವಾಗಿ ಫಾಲೋ ಅಪ್ ಮಾಡುತ್ತಿರುವ ಸ್ವರೂಪ ಹೇಗಿದೆಯೆಂದರೆ ಅವರನ್ನು ಅಧಿಕಾರಿಗಳು 'ಶಬ್ದದ ಮಂತ್ರಿ' ಎಂದೇ ಕರೆಯುವ ಪರಿಪಾಟ ಶುರುವಾಗಿದೆ! ಈ ಶಬ್ದದ ಮಂತ್ರಿಯ ಕಿವಿಮಾತನ್ನು ಇಡೀ ದೇಶ ಕೇಳಿಸಿಕೊಳ್ಳಬೇಕಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65